ವಾರದ ಮುಂಗಾರು

ಭಾನುವಾರ: 6-8-1989



ಮರುಕಳಿಸುತ್ತಿರುವ ಹಿರೋಷಿಮಾಗಳು

ಸಾಮ್ರಾಜ್ಯ ಶಾಹಿಯ ಭೀಕರತೆಗೆ ಹಿರೋಷಿಮಾ ಮತ್ತು ನಾಗಸಾಕಿ ಸಾಕ್ಷಿ ಹೇಳಿದವು. ಮಾನವತೆಯ ಮೇಲೆ ಎಸಗಲಾದ ಅಣುಬಾಂಬಿನ ಕ್ರೂರ ಆಕ್ರಮಣಕ್ಕೆ ಇಂದಿಗೆ 44 ವರ್ಷಗಳು ಸಂದವು. ಈ ದಾಳಿ ಬದುಕನ್ನು ಪ್ರೀತಿಸುವವರೆಲ್ಲರ ದಾಳಿಗೆ ಈಡಾಯಿತು.ಈಗ ಸಾಮ್ರಾಜ್ಯಶಾಹಿ ತನ್ನ ದಾಳಿಯ ರೂಪವನ್ನು ಬದಲಿಸಿಕೊಂಡಿದೆ. ಮೂರನೇ ಜಗತ್ತಿನ ರಾಷ್ಟ್ರಗಳಲ್ಲಿ ಎಷ್ಟೋ 'ಹಿರೋಷಿಮಾ' ಗಳನ್ನು ಮೀರಿಸುವ ಬರ್ಬರ ಕೃತ್ಯಗಳನ್ನು ಎಸಗಲಾರಂಭಿಸಿದೆ.

1945,ಆಗಸ್ಟ್ 6 ಜಪಾನ್ ದೇಶದ ಹಿರೋಷಿಮಾ ನಗರದಲ್ಲಿ ಜನ-ಜೀವನ ಎಂದಿನಂತೇ ಇತ್ತು. ಮಕ್ಕಳು ಶಾಲೆ ಸೇರುವ ಉತ್ಸಾಹದಲ್ಲಿದ್ದರೆ, ಜನಸಾಮಾನ್ಯರು ಕಾರ್ಖಾನೆ ಮತ್ತು ಕಚೇರಿಗಳಿಗೆ ಹೊರಡಲು ಸಿದ್ಧರಾಗುತ್ತಿದ್ದರು.

ಅಂದು ಬೆಳಗ್ಗೆ ಸೂರ್ಯ ರಶ್ಮಿ ಪ್ರಖರವಾಗಿ ನಗರದ ಎಲ್ಲೆಡೆ ಹರಡಿತ್ತು. 8.15ರ ಸಮಯ ತಲುಪುತ್ತಿದ್ದಂತೆ ಆಕಾಶದಲ್ಲಿ ಹಾರುತ್ತಿರುವ ವಿಮಾನದಿಂದ ಎಸೆಯಲ್ಪಟ್ಟ ವಸ್ತುವೊಂದು ಪ್ರಕಾಶಮಾನವಾದ ಬೆಳಕನ್ನು ಬೀರುತ್ತಾ ಭಯಂಕರ ಶಬ್ದದೊಂದಿಗೆ ನೆಲಕ್ಕೆ ಅಪ್ಪಳಿಸಿತು.

ಆಕಾಶದಿಂದ ಬೀಳುತ್ತಿರುವುದೇನು ಎಂದು ನೋಡಿದವರೆಲ್ಲರೂ ತಮ್ಮ ದೃಷ್ಟಿ ಕಳೆದುಕೊಂಡರು. ಅಸಂಖ್ಯಾತ ಜನ ಕೆಲವೇ ಕ್ಷಣಗಳಲ್ಲಿ ಸುಟ್ಟು ಭಸ್ಮವಾದರು. ಈ ರೀತಿ ಆಗಲು ಕಾರಣವೇನು ಎಂದು ತಿಳಿಯುವಷ್ಟರಲ್ಲೇ ಜನರಿಗೆ ನರಕ ಸದೃಶ ಅನುಭವ!

ಜಗತ್ತಿನಲ್ಲಿ ಮಾನವ ಜನಾಂಗ ಪ್ರಥಮವಾಗಿ ಅನುಭವಿಸಿದ ಈ ಅಮಾನವೀಯ ದುರಂತಕ್ಕೆ ಸಾಮ್ರಾಜ್ಯಶಾಹಿ ಅಮೆರಿಕ 0.7 ಕಿ. ಜಿ. ಯುರೇನಿಯಂ 235 ಪರಮಾಣು ಇಂಧನವನ್ನು ಹೊಂದಿದ ಪುಟ್ಟ ಮಗು' ('ಲಿಟ್ಲ್ ಬಾಯ್') ಎಂಬ ಹೆಸರಿನ ಅಣುಬಾಂಬ್‌ನ್ನು ಹಿರೋಷಿಮಾ ನಗರದಲ್ಲಿ ಹಾಕಿದುದು ಕಾರಣವಾಗಿತ್ತು. ಈ ಅಣುಬಾಂಬ್ ದುರಂತಕ್ಕೆ ಎರಡು ಲಕ್ಷಕ್ಕೂ ಹೆಚ್ಚು ಜನ ಬಲಿಯಾಗಿದ್ದರು.

ಹಿರೋಷಿಮಾ ದಾಳಿಯಲ್ಲಿ ತೃಪ್ತಿ ಕಾಣದ ರಕ್ತ ಪಿಪಾಸು ಅಮೆರಿಕ, 1945 ಆಗಸ್ಟ್ 9ರಂದು ನಾಗಸಾಕಿ ನಗರದ ಮೇಲೂ 'ದಪ್ಪ ಮನುಷ್ಯ' FAT) MAN) ಎಂಬ ಹೆಸರಿನ ಮತ್ತೊಂದು ಅಣುಬಾಂಬ್ ದಾಳಿ ನಡೆಸಿತು.

ನಾಗಸಾಕಿಯಲ್ಲೂ 1,40,000 ಮಂದಿ ಮೃತರಾಗಲು 1 ಕಿ.ಜಿ. ಪ್ಲುಟೋನಿಯಂ 239 ಪರಮಾಣು ಇಂಧನದ ಈ ಪರಮಾಣುಬಾಂಬ್ ಕಾರಣವಾಯಿತು. ಎರಡು ನಗರಗಳಲ್ಲೂ ಅಸಂಖ್ಯಾತ ಕಟ್ಟಡಗಳು ಕುಸಿದು ಬಿದ್ದವು. ಆ ಪ್ರದೇಶದಲ್ಲಿ ಬದುಕಿ ಉಳಿದ ನಿವಾಸಿಗಳು ಅನೇಕರು ಅಂಗವಿಕಲರಾದರು. ಇಂದಿಗೂ ಅವರಿಗೆ ವಿಕೃತ ರೂಪದ ಮಕ್ಕಳು ಜನಿಸುತ್ತಿದ್ದಾರೆ; ಅಣುಬಾಂಬ್ ದಾಳಿ ನಡೆದು ಇಂದಿಗೆ ನಾಲ್ಕೂವರೆ ದಶಕಗಳೇ ಕಳೆದರೂ ಆ ನೆಲದ ಉರಿ ಇನ್ನೂ ಆರಿಲ್ಲ. ಆ ಕರಾಳ ನೆನಪಿನ ಹಸಿಯು ಇನ್ನೂ ಮಾಗಿಲ್ಲ.

ದಾಳಿಯ ಚಾರಿತ್ರಿಕ ಹಿನ್ನೆಲೆ

ಆರ್ಯ ಜನಾಂಗ ಜಗತ್ತನ್ನು ಆಳಬೇಕು ಎಂದು ಘೋಷಣೆ ಹೊರಡಿಸಿದ ಹಿಟ್ಲರ್ ಫ್ಯಾಸಿಸ್ಟ್ ಕೂಟ ದ್ವಿತೀಯ ಮಹಾಯುದ್ಧ ಆರಂಭಿಸಿತು. ರಶ್ಯಾದೊಂದಿಗೆ ಅನಾಕ್ರಮಣ ಒಪ್ಪಂದ ಮಾಡಿದ ವೇಳೆಯಲ್ಲಿ ಹಿಟ್ಲರ್ ಯುರೋಪ್ ಖಂಡದ ಅನೇಕ ದೇಶಗಳನ್ನು ವಶಪಡಿಸಿಕೊಂಡನು.

ಆದರೆ, ಹಿಟ್ಲರ್ ರಶ್ಯಾದೊಂದಿಗೆ ಮಾಡಿದ ಒಪ್ಪಂದ ಮುರಿದು ಹಠಾತ್ ದಾಳಿ ಆರಂಭಿಸುವ ಬಗ್ಗೆ ಸ್ಪಷ್ಟವಾದ ಮಾಹಿತಿ ತಿಳಿದೂ, ಸ್ಟಾಲಿನ್ ಅಲಕ್ಷಿಸಿದರು. 'ಸರಕಾರಿ ವಿರೋಧಿ' ಎಂಬ ಕಾಯ್ದೆ ಪ್ರಕಾರ ಸ್ಟಾಲಿನ್ ತನ್ನ ಸೇನೆಯ ಅನೇಕ ಹಿರಿಯ ಅಧಿಕಾರಿ ಮತ್ತು ಸೈನಿಕರ ಮೇಲೆ ಸಂಶಯಿಸಿ ಅನೇಕರನ್ನು ಕಸ್ಟಸೆದರು. ಹಲವರನ್ನು ಗುಂಡಿಕ್ಕಿ ಕೊಲ್ಲಿಸಿದರು.

ಸ್ಟಾಲಿನ್ ಅವರ ಈ ತಪ್ಪುಗಳಿಂದಾಗಿ, ಹಿಟ್ಲರ್ ರಶ್ಯಾದೊಳಗೆ ಮುನ್ನಡೆಯಲು ಸಾಧ್ಯವಾಯಿತು. ಸಮಾಜವಾದಿ ದೇಶದ ಸಾಮಾನ್ಯ ಸೈನಿಕರು ಮತ್ತು ಅಧಿಕಾರಿಗಳು ನಾಜೀ ಪಡೆಯ ವಿರುದ್ಧ ಪ್ರತಿ ಆಕ್ರಮಣ ಯೋಜನೆಯನ್ನು ರೂಪಿಸಿದಾಗಲೇ ಹಿಟ್ಲರ್ ರಶ್ಯಾ ಬಿಟ್ಟು ತೊಲಗಬೇಕಾಯಿತು.

1945 ಮೇ 8ರಂದು ರಶ್ಯನ್ ಸೈನಿಕರು ಬರ್ಲಿನ್ ವಶಪಡಿಸಿಕೊಳ್ಳುವುದರೊಂದಿಗೆ ಫ್ಯಾಸಿಸ್ಟ್ ಕೂಟದ ಪ್ರಮುಖ ಹಿಟ್ಲರ್‌ಶಾಹಿಯು ಅಂತ್ಯವಾಗಿತ್ತು. ರಶ್ಯಾ, ಬ್ರಿಟನ್ ಮತ್ತು ಅಮೆರಿಕ ಫ್ಯಾಸಿಸ್ಟ್ ವಿರೋಧಿ ಕೂಟವನ್ನು ಯುದ್ಧದ ಕೊನೆಯ ಘಟ್ಟದಲ್ಲಿ ರಚನೆ ಮಾಡಲಾಗಿತ್ತು. ಆದರೆ ರಶ್ಯಾ ಮತ್ತು ಜರ್ಮನಿ ನಡುವೆ ಯುದ್ಧ ಮುಂದುವರಿದಾಗ ಕೇವಲ ವೀಕ್ಷಕರಾಗಿದ್ದ ಅಮೆರಿಕ ಮತ್ತು ಬ್ರಿಟನ್ ಸೋಲುವ ಸಾಧ್ಯತೆ ಇರುವ ದೇಶಕ್ಕೆ ಬೆಂಬಲ ನೀಡುವ ಉದ್ದೇಶ ಹೊಂದಿದ್ದವು.

ದ್ವಿತೀಯ ಮಹಾಯುದ್ಧದಲ್ಲಿ ಹಿಟ್ಲರ್‌ನ್ನು ಸೋಲಿಸಿದ ಕೀರ್ತಿ ಸಮಾಜವಾದಿ ರಶ್ಯಾ ಪಡೆಯುತ್ತಿರುವುದನ್ನು ಅಮೆರಿಕಕ್ಕೆ ಸಹಿಸಲು ಅಸಾಧ್ಯವಾಯಿತು. ಈ ಯುದ್ಧದಿಂದಾಗಿ ಯುರೋಪ್ ಖಂಡದಲ್ಲಿ ವಿಮೋಚನೆಗೊಳಿಸಿದಂತೆ ಏಷ್ಯಾ ಖಂಡದಲ್ಲೂ ಅನೇಕ ದೇಶಗಳನ್ನು ವಿಮೋಚನೆಗೊಳಿಸಿಯಾರೆಂಬ ಭಯ ಸಾಮ್ರಾಜ್ಯಶಾಹಿಗೆ ಇತ್ತು.

1945 ಮೇ 8ರಂದು ಫ್ಯಾಸಿಸ್ಟ್ ಬಣದ ಜಪಾನಿನ ಮೇಲೆ ರಶ್ಯಾ ಮಂಚೂರಿಯಾ ಮೂಲಕ ಆಕ್ರಮಣ ಮಾಡುವ ಯೋಜನೆ ಇತ್ತು. ಇದಕ್ಕಿಂತ ಮೊದಲು ಸೋತು ಸುಣ್ಣವಾಗಿ ಶರಣಾಗಲು ಸಿದ್ಧವಾಗಿರುವ ಜಪಾನಿನ ಮೇಲೆ ಆಕ್ರಮಣ ಮಾಡುವ ಮೂಲಕ ಜಗತ್ತಿನಲ್ಲಿ ತನ್ನ ಆಧಿಪತ್ಯ ಉಳಿಸಬೇಕೆಂದು ಅಮೆರಿಕ ಬಯಸಿತ್ತು.

ಪರ್ಲ್ ಬಂದರಿನ ಮೇಲೆ ಜಪಾನ್ ದಾಳಿ ಆರಂಭಿಸಿದ ಕಾರಣ ಮುಂದಿಟ್ಟು ಅಮೆರಿಕ, ಹಿರೋಷಿಮಾ ಮತ್ತು ನಾಗಸಾಕಿ ಮೇಲೆ ಅಣು ಬಾಂಬ್ ದಾಳಿ ನಡೆಸಿತು.

ಜಪಾನಿನ ವಿರುದ್ಧ ಈಗಾಗಲೇ ನಡೆಸಿದ ಯುದ್ಧಗಳಿಂದಾಗಿ ಸೋಲನ್ನು ಒಪ್ಪಿಕೊಳ್ಳುವ ಸ್ಥಿತಿಯಲ್ಲಿದ್ದ ವೇಳೆ, ಅಣು ಬಾಂಬ್ ದಾಳಿಯ ಅಗತ್ಯವಿರಲಿಲ್ಲ ಎಂದು ಗ್ರೇಟ್ ಬ್ರಿಟನ್‌ನ ಅಂದಿನ ಪ್ರಧಾನ ಮಂತ್ರಿ ವಿನ್‌ಸ್ಟನ್ ಚರ್ಚಿಲ್ ಮತ್ತು ಅಮೆರಿಕ ಅಧ್ಯಕ್ಷ ರೂಸ್‌ವೆಲ್ಟ್ ಅವರ ಮುಖ್ಯ ಅಧಿಕಾರಿ ಫೀಲ್ಡ್ ಅಡ್ಮಿರಲ್ ಡಬ್ಲ್ಯು. ಡಿ. ಲೀಫಿ ಅವರು ಹೇಳಿದ್ದು ಇಂದಿಗೂ ದಾರುಣ ಸತ್ಯವಾಗಿ ಚರಿತ್ರೆಯಲ್ಲಿ ದಾಖಲಾಗಿದೆ.

ಅಂದು ದ್ವಿತೀಯ ಮಹಾಯುದ್ಧದಲ್ಲಿ ಬಲಿಷ್ಠ ರಾಷ್ಟ್ರಗಳ ಮತ್ತು ನಾಯಕರ ಜಾಗತಿಕ ಆಧಿಪತ್ಯದ ಕನಸುಗಳಿಗಾಗಿ ಜಪಾನಿನ ಅಮಾಯಕ ಜನ ಸೇರಿದಂತೆ ಐದು ಕೋಟಿ ಜನರು ಮೃತರಾದರು,

ಅಣು ಉಪಕರಣಗಳ ದಾಸ್ತಾನು

"ಜಪಾನಿನಲ್ಲಿ ಅಣುಬಾಂಬ್ ಪ್ರಯೋಗ ದ್ವಿತೀಯ ಮಹಾಯುದ್ಧದ ಕೊನೆ ಘಟ್ಟವಲ್ಲ. ಬದಲಾಗಿ, ಅಮೆರಿಕ ಮತ್ತು ರಶ್ಯಾ ನಡುವಿನ ಶೀತಲ ಯುದ್ಧದ ಆರಂಭದ ಘಟ್ಟವಾಗಿದೆ" ಎಂದು ನೊಬೆಲ್ ಪ್ರಶಸ್ತಿ ವಿಜೇತ ಮತ್ತು ಬ್ರಿಟನಿನ ಭೌತ ಶಾಸ್ತ್ರಜ್ಞ ಪಿ. ಎಂ.ಎಸ್. ಬ್ಲಾಕೆಟ್ ಅವರು ಹೇಳಿರುವುದು ಅಂದಿನ ಪರಿಸ್ಥಿತಿಯ ವಾಸ್ತವ ಚಿತ್ರವನ್ನು ದಟ್ಟವಾಗಿ ಚಿತ್ರಿಸಬಲ್ಲುದಾಗಿದೆ.

ಜಗತ್ತಿನಲ್ಲಿ ಇಂದು ದಾಸ್ತಾನವಿರುವ ಅಣು ಉಪಕರಣಗಳನ್ನು ಪರಿಶೀಲಿಸಿದರೆ ಅಂದು ಹಿರೋಶಿಮಾ ಮತ್ತು ನಾಗಸಾಕಿಯಲ್ಲಿ ಉಪಯೋಗಿಸಲಾದ ಅಣುಬಾಂಬ್ ಭ್ರೂಣಸಮಾನವೆನಿಸಬಹುದು, ಅಂದಿನ ಸಾಮರ್ಥ್ಯಕ್ಕಿಂತ 20 ಲಕ್ಷಕ್ಕೂ ಮೀರಿದ ಮತ್ತು ಜಗತ್ತನ್ನು ಅನೇಕ ಬಾರಿ ನಾಶ ಮಾಡುವ ಸಾಧ್ಯತೆಯುಳ್ಳ ಅಣು ಉಪಕರಣಗಳ ದಾಸ್ತಾನಿದೆ.

ಸುನಿಲ್ ನಟೇಕರ್

ಬೃಹತ್ ರಾಷ್ಟ್ರಗಳು ತಮ್ಮ ಅಣು ಉಪಕರಣಗಳು ಸೇರಿದಂತೆ ಸೇನೆಯ ವೆಚ್ಚಗಳಿಗಾಗಿ ಮೂರನೇ ಜಗತ್ತಿನ ರಾಷ್ಟ್ರಗಳ ಸಂಪತ್ತನ್ನು ವಿವಿಧ ರೀತಿಯಲ್ಲಿ ಕೊಳ್ಳೆ ಹೊಡೆಯುತ್ತಿವೆ. ನೆರೆಹೊರೆಯ ದೇಶಗಳೊಂದಿಗೆ ಪೈಪೋಟಿ ನಡೆಸಲು ಅಥವಾ ಆಕ್ರಮಣ ಎದುರಿಸಲೆಂದು ಕೋಟ್ಯಂತರ ರೂಪಾಯಿಗಳನ್ನು ಇದಕ್ಕಾಗಿ ವೆಚ್ಚ ಮಾಡಲಾಗುತ್ತಿದೆ. ಆದರೆ ವಾಸ್ತವವಾಗಿ ಆ ಉಪಕರಣಗಳನ್ನು ದೇಶದಲ್ಲಿ ಹೋರಾಡುತ್ತಿರುವ ಜನತೆಯ ವಿರುದ್ಧ ಉಪಯೋಗಿಸಲಾಗುತ್ತಿದೆ.

ದೇಶದ ಆರ್ಥಿಕತೆಯು ಹೆಚ್ಚಿನ ಮೊತ್ತ ಸೇನೆಯ ಉಪಕರಣಗಳಿಗಾಗಿ ವೆಚ್ಚ ಮಾಡುವುದರಿಂದ ಆರೋಗ್ಯ, ಶಿಕ್ಷಣ ಮತ್ತು ಇತರ ಸಾಮಾಜಿಕ ಅವಶ್ಯಕತೆಗಳಿಗಾಗಿ ವೆಚ್ಚ ಕಡಿಮೆಯಾಗುತ್ತದೆ. ಇದರಿಂದ ಆ ದೇಶಗಳ ಬಡತನ ಅನಿವಾರ್ಯವಾಗಿ ಹೆಚ್ಚಾಗುತ್ತದೆ.

ಅಣು ಯುದ್ಧ ಆರಂಭವಾದರೆ ಯಾವುದೇ ರಾಷ್ಟ್ರಕ್ಕೆ ಜಯ ಎಂಬುದೇ ಇಲ್ಲ. ಏಕೆಂದರೆ ಆಗ ಮಾನವ ಕುಲ ಸಂಪೂರ್ಣ ನಾಶವಾಗುತ್ತದೆ. ಅಣು ಯುದ್ಧದಿಂದಾಗಿ ಉದ್ಭವಿಸುವ ಹೊಗೆಯು ಮೋಡದ ರೂಪದಲ್ಲಿ ಭೂಮಿಯ ಮೇಲ್ಮೈಯನ್ನು ಸಂಪೂರ್ಣ ಆವರಿಸಿ ಸೂರ್ಯನ ಬೆಳಕು ಭೂಮಿಗೆ ಬಾರದೆ ಕತ್ತಲಾಗುತ್ತದೆ. ಮನುಷ್ಯ ಜೀವಿಯೊಂದಿಗೆ ಪ್ರಾಣಿ ಸಸ್ಯಗಳು ಕೂಡ ನಾಶವಾಗುತ್ತವೆ.

"ನಾನು ಅನೇಕ ಪುಸ್ತಕಗಳನ್ನು ಬರೆಯಬೇಕಾಗಿದೆ. ಆದರೆ ಅವುಗಳನ್ನು ಓದಲು ಯಾರಾದರೂ ಇರುತ್ತಾರೆಯೇ ಎಂದು ನನ್ನನ್ನು ನಾನೇ ಪ್ರಶ್ನಿಸಿಕೊಳ್ಳುತ್ತೇನೆ.ಏಕೆಂದರೆಒಂದುಅಣು ಬಾಂಬ್

ಪ್ರತ್ಯಕ್ಷಾನುಭವ...

1945 ಆಗಸ್ಟ್ 6ರಂದು ಹಿರೋಷಿಮಾ ನಗರದಲ್ಲಿ ಅಣುಬಾಂಬ್ ಸಿಡಿದ ಕೇಂದ್ರದಿಂದ 1.7ಕಿ.ಮೀ.ದೂರದಲ್ಲಿ ವಾಸವಾಗಿದ್ದ ಫುಟಬ ಕಿಟವಮ, 33ವರ್ಷ ಪ್ರಾಯದ ಗೃಹಿಣಿಯ ವಾಕ್ಯಗಳಲ್ಲಿ ಕರಾಳ ನೆನಪುಗಳು ಅಂದಿನ ನರಕ ಸದೃಶ ಚಿತ್ರಣವನ್ನು ನೀಡುತ್ತವೆ.

ಆಕಾಶದಿಂದ ಏನಾದರೋ ವಸ್ತು ಕೆಳಗೆ ಬರುತ್ತಿದೆ ಎಂದು ಯಾರೋ ಕೂಗಿದಾಗ ನಾನು ಅವಳು ತೋರಿಸಿದ ದಿಕ್ಕಿಗೆ ತಿರುಗಿ ನೋಡಿದೆ. ಆಕಾಶದ ಕಡೆ ನೋಡಿದಾಕ್ಷಣ ಕಂಡ ಮಿಂಚಿನಂತೆ ಉರಿಯುವ ಬೆಳಕನ್ನು ಹೇಗೆ ವಿವರಿಸುವುದೆಂದು ಗೊತ್ತಾಗುವುದಿಲ್ಲ. ತಕ್ಷಣ ನನ್ನ ಮನೆ ನೆಲಸಮವಾಯಿತು. ನನ್ನ ತಲೆ ಮತ್ತು ದೇಹದ ಚರ್ಮ ಬೀಳಲಾರಂಭಿಸಿತು. ನಾನು ಕೆಡವಿಬಿದ್ದ ಕಸಗಳ ನಡುವಿನಿಂದ ಹೊರಳಾಡಿ ಹೊರ ಬಂದೆ.

ಗಾಳಿಯು ಬೆಂಕಿಯಂತೆ ಉರಿಯುತ್ತಿರುವ ಅನುಭವವಾಯಿತು. ನನ್ನ ಮುಖದ ಚರ್ಮ ಸುಲಿದಿದೆ ಎಂದು ತಿಳಿದಾಗ ದುಃಖದ ಮಡುವಾಗಿ ಹೋದೆ. ನನ್ನ ತೋಳುಗಳ, ಕೈಗಳ, ಚರ್ಮ ಸೇರಿದಂತೆ ತಲೆಯಿಂದ ಪಾದದ ತನಕದ ಚರ್ಮ ಸುಲಿದು ಬಂದು ನೇತಾಡುತಿತ್ತು.

ಒಂದು ಕ್ಷಣದ ಹಿಂದೆ ಅಷ್ಟೊಂದು ಸ್ಪಷ್ಟವಾಗಿ ನೀಲಿಯಾಗಿ ಹೊಳೆಯುತ್ತಿದ್ದಂತಹ ಆಕಾಶಕ್ಕೆ ಏನಾಯಿತು? ಈಗ ಹೊಗೆಯಿಂದ ಅವ್ಯಕ್ತವಾಗಿ ಕಪ್ಪಾಗಿದೆ. ನಾನು ಹುಚ್ಚಿಳಂತಾಗಿ ಸೇತುವೆಯ ಬಳಿ ಓಡಿದೆ.

ಅಲ್ಲಿಯ ದೃಶ್ಯ ನೋಡಿ ನಾನು ನಾನು ದಿಗ್ಭ್ರಾಂತಳಾದೆ. ನೂರಾರು ಜನ ನೀರಿನಲ್ಲಿ ಬಿದ್ದು ಕೂಗಾಡುತ್ತಿದ್ದರು ಅವರ ಮುಖಗಳು ಸುಕ್ಕುಗಟ್ಟಿದ್ದವು ಹಾಗೂ ಕೂದಲುಗಳು ನೇರವಾಗಿ ನಿಂತಿದ್ದವು. ಅದೇ ರೀತಿ ನೋವಿನ ಅನುಭವ ನನಗೂ ಆಗುತ್ತಿದ್ದು ನದಿಗೆ ಹಾರಬೇಕೆಂದೆನಿಸಿದರೂ ಈಜಲು ಬರುವುದಿಲ್ಲ ಎಂದು ಸುಮ್ಮನಾದೆ.

ಸೇತುವೆಯ ಬಳಿ ಶಾಲಾ ಹುಡುಗಿಯರು ನಿದ್ದೆಯಲ್ಲಿರುವಂತೆ ಗೊಂದಲದಿಂದ ನಡೆಯುತ್ತಿದ್ದರು. ಸೇತುವೆಯ ಕೆಳಗೆ ನಾಯಿ ಮತ್ತು ಬೆಕ್ಕುಗಳ ರೀತಿಯಲ್ಲಿ ಮೃತ ದೇಹಗಳು ತೇಲುತ್ತಿದ್ದವು.

ಜಗತ್ತಿನಲ್ಲಿ ಈ ರೀತಿ ಭಯಾನಕ ಘಟನೆ ನಡೆಯಲು ಹೇಗೆ ಸಾಧ್ಯ? ನನ್ನ ಬಾಲ್ಯದ ದಿನಗಳಲ್ಲಿ ಅಜ್ಜ ವರ್ಣಿಸಿದಂತಹ 'ನರಕ' ಭೂಮಿಯ ಮೇಲೆ ಬಿದ್ದಿದೆಯೋ ಎಂದು ಆಶ್ಚರ್ಯಗೊಂಡೆ.

ಸಾಮಾನ್ಯ ಸುಟ್ಟ ಗಾಯಗಳಿಂದಾಗಿ ಆಗುವ ನೋವಿಗಿಂತ ಭಿನ್ನವಾದ ಅನುವಭವವಾಯಿತು. ನನ್ನ ಬಳಿ ಕುಳಿತಿರುವ ಕಿರಿಯ ಶಾಲಾ ಮಕ್ಕಳು ಭಯದಿಂದ 'ಅಮ್ಮಾ ಅಮ್ಮಾ' ಎಂದು ನೋವಿನಿಂದ ನಿರಂತರವಾಗಿ ಕೂಗಾಡುತ್ತಿದ್ದರು. ಅನೇಕ ಸುಟ್ಟ ಗಾಯಗಳಿಂದ ಮತ್ತು ರಕ್ತ ಸೋರುವಿಕೆಯಿಂದ ಯಾರೂ ನೋಡಲು ಅಸಾಧ್ಯವಾದ ರೀತಿಯಲ್ಲಿ ನರಳುತ್ತಿದ್ದರು. ಶಾಲಾ ಮಕ್ಕಳು ತಾಯಿಯನ್ನು ಕೇಳುತ್ತಾ ಒಬ್ಬರ ಬಳಿಕ ಒಬ್ಬರಂತೆ ಸಾವಿಗೀಡಾಗುವುದನ್ನು ಕಣ್ಣಾರೆ ಕಾಣಬೇಕಾಯಿತಲ್ಲದೆ ನನ್ನಿಂದ ಏನೂ ಮಾಡಲಾಗಲಿಲ್ಲ.

ನನ್ನ ಮುಖದ ಮೇಲೆ ಕೈ ಹಾಕಿದಾಗ ಬಿಳಚಿಕೊಂಡ ರೀತಿ ಇತ್ತು. ನನಗೆ ಈಗ ಏನೂ ನೋಡಲು ಆಗುತ್ತಿಲ್ಲ ಮತ್ತು ಕಾಣಿಸುತ್ತಿಲ್ಲ. ಗಾಯಾಳುಗಳನ್ನು ಟ್ರಕ್‌ಗಳಲ್ಲಿ ಕೊಂಡೊಯ್ಯುತ್ತಿರುವುದನ್ನು ಕಂಡೆ. ಅವರ ರೂಪಗಳೆಲ್ಲಾ ಕರಡಿಯ ಮುಖದಂತಿದ್ದವು. ದಾರಿಯ ಎರಡು ಪಕ್ಕದಲ್ಲೂ ಅನೇಕ ಮಂದಿ ನಿದ್ರೆಯಲ್ಲಿ ನಡೆಯುವ ರೀತಿ ಸುತ್ತಾಡುತ್ತಿದ್ದರು.

ಸಾಮ್ರಾಜ್ಯಶಾಹಿ ರಾಷ್ಟ್ರಗಳ ನಿಧಾನ ವಿಷಕ್ಕೆ ತುತ್ತಾಗುತ್ತಿರುವ ತೃತೀಯ ಜಗತ್ತಿನ ಸ್ಥಿತಿ

ಸಮರಭೂಮಿಯ ಮೇಲಿರುವ ವಸ್ತುಗಳನ್ನು ಸೀದಂತೆ ಎಲ್ಲವನ್ನೂ ನಾಶಪಡಿಸುತ್ತದೆ" ಎಂದು ನೊಬೆಲ್ ಪ್ರಶಸ್ತಿ ವಿಜ್ಞಾನಿ ಜಾರ್ಜ್‌ವಾಲ್ಡ್ ಅವರು ಹೇಳಿರುವುದು ಭವಿಷ್ಯಕ್ಕೆ ಹಿಡಿದ ಕನ್ನಡಿಯಾಗಿದೆ.

ತೃತೀಯ ಜಗತ್ತಿನ ಪ್ರಸ್ತುತ ಪರಿಸ್ಥಿತಿ

ಅಣುಬಾಂಬ್ ದಾಳಿ ನಡೆದು 45ನೇ ವರ್ಷಕ್ಕೆ ಮುನ್ನಡೆಯುವ ಸಂದರ್ಭದಲ್ಲಿ ಅಂದಿನ ಘಟನೆಗಳನ್ನು ನೆನಪಿಸಿ, ದುರಂತದಲ್ಲಿ ಮೃತರಾದವರ ಬಗ್ಗೆ ಸಂತಾಪ ಅಥವಾ ದುರ್ಘಟನೆಗೆ ಕಾರಣವಾದ ರಾಷ್ಟ್ರವನ್ನು ಟೀಕಿಸುವ ಬದಲು ಜಗತ್ತಿನ ಇಂದಿನ ವಾಸ್ತವತೆಯನ್ನು ಗ್ರಹಿಸುವುದು ಮುಖ್ಯವಾಗಿದೆ.

ಅಂದು ಬಲಾಢ್ಯ ರಾಷ್ಟ್ರಗಳು ಜಗತ್ತನ್ನು ತಮ್ಮ ಹತೋಟಿಯಲ್ಲಿಡುವ ಉದ್ದೇಶಗಳಿಗಾಗಿ ಅಣುಬಾಂಬ್ ದಾಳಿ ಮೂಲಕ ಕ್ಷಣದಲ್ಲೇ ಸಾವಿರಾರು ಜನರನ್ನು ಸಾವಿಗೀಡಾಗುವಂತೆ ಮಾಡಿದ್ದವು. ಆದರೆ, ಆ ದಿನಗಳಲ್ಲಿ ಕಿತ್ತಾಟ ಮಾಡಿರುವ ಬೃಹತ್ ರಾಷ್ಟ್ರಗಳು, ಇಂದು ಜೊತೆಯಾಗಿ ಮೂರನೇ ಜಗತ್ತಿನ ರಾಷ್ಟ್ರಗಳ ಜನರನ್ನು ವಿವಿಧ ರೀತಿಯಿಂದ ನಿರಂತರವಾದ ಶೋಷಣೆಗೆ ಸಾವಿನ ದವಡೆಗೆ ನೂಕುತ್ತಿವೆ. ಇದು ಹಿರೋಷಿಮಾ ಮತ್ತು ನಾಗಸಾಕಿ ಅಣುಬಾಂಬ್‌ಗಿಂತ ಹೆಚ್ಚಿನ ರೀತಿ ದುಷ್ಪರಿಣಾಮಕಾರಿಯಾಗಿದೆ.

ಸಾಮ್ರಾಜ್ಯಶಾಹಿ ರಾಷ್ಟ್ರಗಳು "ಅಣುಬಾಂಬ್ ದಾಳಿಯ ಬಳಿಕ ಅಣುಯುದ್ಧ ನಡೆದರೆ ಜಗತ್ತು ವಿನಾಶ ಆಗಲಿದೆ" ಎಂಬ ಭಯವನ್ನು ಸೃಷ್ಟಿಸಿ, ಮೂರನೇ ಜಗತ್ತಿನ ರಾಷ್ಟ್ರಗಳ ಸಂಪತ್ತನ್ನು ನಿರಂತರವಾಗಿ ಕೊಳ್ಳೆ ಹೊಡೆಯುತ್ತಿವೆ.

ಅಭಿವೃದ್ಧಿಗೊಂಡ ಸಮಾಜವಾದಿ ರಾಷ್ಟ್ರಗಳು 'ವಿಶ್ವಶಾಂತಿ'ಯ ಮಂತ್ರವನ್ನು ಪಠಿಸುತ್ತಾ ಮೂರನೇ ಜಗತ್ತಿನ ರಾಷ್ಟ್ರಗಳ ಜನರು ತಮ್ಮ ಮೇಲೆ ನಡೆಯುತ್ತಿರುವ ದಬ್ಬಾಳಿಕೆಯನ್ನು ವಿರೋಧಿಸಿ ಹೋರಾಟದ ಕಣಕ್ಕೆ ಇಳಿದಲ್ಲಿ 'ಅಣುಯುದ್ಧ' ಆಗುವ ಸಂಭವವಿದೆ ಎಂದು ತನಗೆ ಸಾಧ್ಯವಾಗುವ ರೀತಿಯಲ್ಲಿ ಈ ರಾಷ್ಟ್ರಗಳನ್ನು ಸುಲಿಗೆ ನಡೆಸುತ್ತಿವೆ. ಆದ್ದರಿಂದ ಇಂದು ವಿಶ್ವಶಾಂತಿ ಎಂಬುದು ಕೇವಲ ಬೃಹತ್ ರಾಷ್ಟ್ರಗಳು ಪರಸ್ಪರ ಆಕ್ರಮಣ ಮಾಡದೇ ನಿರಂತರವಾಗಿ ಮೂರನೇ ಜಗತ್ತಿನ ರಾಷ್ಟ್ರಗಳನ್ನು ಸುಲಿಗೆ ಮಾಡುವ 'ಸ್ವಾತಂತ್ರ್ಯ'ವಾಗಿದೆ.

ಆದುದರಿಂದ ಮೂರನೇ ಜಗತ್ತಿನ ಜನತೆಯ ಜ್ವಲಂತ ಸಮಸ್ಯೆಗಳ ಪರಿಹಾರಕ್ಕಾಗಿ ಶ್ರಮಿಸದೆ 'ವಿಶ್ವಶಾಂತಿ'ಗಾಗಿ ನಡೆಸುವ ಹೋರಾಟಗಳೆಲ್ಲಾ ಅರ್ಥಹೀನವಾದುದಾಗಿವೆ.

ಏಶ್ಯಾ ಮತ್ತು ಆಫ್ರಿಕಾ ಖಂಡ ಸೇರಿದಂತೆ ಲ್ಯಾಟಿನ್ ಅಮೆರಿಕಾದ, ದೇಶಗಳ ಎಲ್ಲಾ ಸಂಪತ್ತನ್ನು ಬೃಹತ್ ರಾಷ್ಟ್ರಗಳು ಅನೇಕ ವರ್ಷಗಳಿಂದ ಸುಲಿಗೆ ಮಾಡುತ್ತಾ ಬಂದಿವೆ. ಇಂದು ಆ ದೇಶಗಳ ಆರ್ಥಿಕತೆಯ ಮೇಲೆ ಪ್ರಭಾವ ಬೀರುವುದು, ಸಾಲ ನೀಡುವುದು, ಸೈನಿಕ ನೆಲೆಗಳನ್ನು ಸ್ಥಾಪಿಸುವುದು, ಕೃಷಿ ಕ್ಷೇತ್ರದಲ್ಲಿ ಪ್ರವೇಶ, ಅಣು ವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸುವುದರ ಮೂಲಕ ಅಲ್ಲಿನ ಜನತೆ ಬಡತನ, ನಿರುದ್ಯೋಗ ಹಾಗೂ ಇತರ ಸಮಸ್ಯೆಗಳನ್ನು ಎದುರಿಸುವಂತೆ ಮಾಡಿವೆ.

ಏಶ್ಯಾ ಖಂಡದ ಮುಸ್ಲಿಂ ಜನಾಂಗದವರು ಹೆಚ್ಚಿನ ಸಂಖ್ಯೆಯಲ್ಲಿರುವ ಅಫ್ಘಾನಿಸ್ತಾನದಲ್ಲಿ ಅಮೆರಿಕ ಮತ್ತು ರಷ್ಯಾ ತಮ್ಮ ಆಧಿಪತ್ಯ ಸ್ಥಾಪಿಸುವ ಸಲುವಾಗಿ ಸಾವಿರಾರು ಮುಗ್ಧರನ್ನು ಕೊಂದಿದ್ದಾರೆ. ಸಮಸ್ಯೆಯ ಮೂಲವನ್ನು ಹುಟ್ಟು ಹಾಕಿದ ರಾಷ್ಟ್ರಗಳಲ್ಲಿ ಒಂದಾದ, ರಷ್ಯಾ ಸೇನೆ ಈಗ ನಿರ್ಗಮಿಸಿದರೂ ಮತ್ತೊಂದು ರಾಷ್ಟ್ರ ಅಮೆರಿಕ ಬಂಡುಕೋರರಿಗೆ ಬೆಂಬಲ ನೀಡುವುದರ ಮೂಲಕ ಮುಗ್ಧ ಅಫ್ಘಾನಿಸ್ತಾನರು ಪ್ರತಿನಿತ್ಯ ಹತ್ಯೆಯಾಗುವುದು ಮುಂದುವರಿಯುತ್ತಿದೆ.

ಲ್ಯಾಟಿನ್ ಅಮೆರಿಕ ದೇಶಗಳಿಗೆ ಸಾಮ್ರಾಜ್ಯಶಾಹಿ ಅಮೆರಿಕ ನಿರಂತರ ಸಾಲ ನೀಡುವುದು, ತಮ್ಮ ಮಾತಿನಂತೆ ನಡೆಯದ ರಾಷ್ಟ್ರಗಳ ವಿರುದ್ಧ ಗ್ರೆನೆಡಾದಲ್ಲಿ ನಡೆಸಿದಂತೆ ಸೇನಾ ಕಾರ್ಯಾಚರಣೆ ನಡೆಸುವುದು, ಎಲ್‌ಸಾಲ್ವಡರ್ ಸೇರಿದಂತೆ ಅನೇಕ ರಾಷ್ಟ್ರಗಳಲ್ಲಿ ಹೋರಾಟ ಮಾಡುತ್ತಿರುವ ಜನತೆಯ ಮೇಲೆ ಅಲ್ಲಿನ ತನ್ನ ಕೈಗೊಂಬೆ ಸರಕಾರ ಮುಖಾಂತರ ದಬ್ಬಾಳಿಕೆ ನಡೆಸುವುದು, ನಿಕರಾಗುವಾದಲ್ಲಿ ಪ್ರತಿಕ್ರಾಂತಿಕಾರಿಗಳಿಗೆ ಬೆಂಬಲ ನೀಡುವುದು ಈ ಎಲ್ಲಾ ಕ್ರಮಗಳ ಮೂಲಕ ಅಲ್ಲಿನ ರಾಷ್ಟ್ರಗಳ ಸಂಪತ್ತನ್ನು ಸಾಮ್ರಾಜ್ಯಶಾಹಿ ಅಮೆರಿಕ ನಿರಂತರವಾಗಿ ಕೊಳ್ಳೆ ಹೊಡೆಯುತ್ತಿದೆ.

ದ. ಆಫ್ರಿಕಾದ ರಾಷ್ಟ್ರಗಳ ಮೂಲ ಜನಾಂಗದವರ ಮೇಲೆ ಅನೇಕ ವರ್ಷಗಳಿಂದ ಬಿಳಿಯರ ಸರಕಾರ ದಬ್ಬಾಳಿಕೆ ನಡೆಸುತ್ತಿದೆ. ವರ್ಣ ಭೇದ ನೀತಿಯ ವಿರುದ್ಧ ನಡೆಯುತ್ತಿರುವ ಹೋರಾಟಗಳಿಂದಾಗಿ ಅನೇಕ ರಾಷ್ಟ್ರಗಳು ವಿಮೋಚನೆಯಾಗುತ್ತಿವೆ.

ತೃತೀಯ ಜಗತ್ತಿನ ರಾಷ್ಟ್ರಗಳಲ್ಲಿ ಅಣು ವಿದ್ಯುತ್ ಸ್ಥಾವರ ಸೇರಿದಂತೆ ಅಪಾಯಕಾರಿಯಾದ ಅನೇಕ ಕಾರ್ಖಾನೆಗಳನ್ನು ಸ್ಥಾಪಿಸಿ ಬಲಿಷ್ಠ ರಾಷ್ಟ್ರಗಳು ತಮ್ಮ ಪ್ರಯೋಗಗಳನ್ನು ನಡೆಸುತ್ತಿವೆ. ಭೋಪಾಲ್ ಕಾರ್ಬೈಡ್ ದುರ್ಘಟನೆಯಂತಹ ಅನೇಕ ಘಟನೆಗಳು ಈ ರಾಷ್ಟ್ರಗಳಲ್ಲಿ ನಡೆದಿವೆ.

"ತೃತೀಯ ಜಗತ್ತಿನದೇಶಗಳಲ್ಲಿ ಪ್ರತಿ ಮೂರು ದಿನಗಳಲ್ಲಿ ಬದುಕ ಬಹುದಾದ 1.2ಲಕ್ಷ ಮಕ್ಕಳು ಸಾಯುತ್ತಾರೆ. ಇದು ಅವರ ನಡುವೆ ಮೂರು ದಿನಕ್ಕೊಂದರಂತೆ ಸಿಡಿಯುವ ಬಾಂಬಿನಂತೆಯೇ" ಎಂದು ಕ್ಯೂಬಾದ ಕ್ರಾಂತಿಕಾರಿ ನಾಯಕ ಫಿಡೆಲ್ ಕಾಸ್ಟ್ರೋ ಅವರು ಹೇಳಿರುವುದು ವಾಸ್ತವ ಪರಿಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ.

ಬೆಳೆಯುತ್ತಿರುವ ಹೋರಾಟಗಳು

ಜಗತ್ತಿನ ಬೃಹತ್ ರಾಷ್ಟ್ರಗಳು ತಳೆದ ನಿಲುವಿನಿಂದಾಗಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಜನತೆ ಅನುಭವಿಸುತ್ತಿರುವ ನೋವಿನ ವಿರುದ್ಧ 'ಹೋರಾಟದ ಕೂಗು' ಪ್ರತಿಧ್ವನಿಸುತ್ತಿದೆ. ಬೃಹತ್ ರಾಷ್ಟ್ರಗಳು ಸಾವಿರಾರು ಬಗೆಗಳಿಂದ ಈ ರಾಷ್ಟ್ರಗಳ ಸಂಪತ್ತನ್ನು ಲೂಟಿ ಮಾಡಿ ಖಾಲಿ ಮಾಡಿದ್ದಲ್ಲದೆ ಯುದ್ಧಗಳನ್ನು ನಡೆಸುವ ಮೂಲಕ ಅನೇಕ ಮಂದಿಯನ್ನು ಕೊಂದಿವೆ.

ಇಲ್ಲಿಯ ತನಕ ಬಲಿಷ್ಠ ರಾಷ್ಟ್ರಗಳ ದಬ್ಬಾಳಿಕೆಯನ್ನು ಮೂರನೇ ಜಗತ್ತಿನ ಜನತೆ ಅಲ್ಪ ವಿರೋಧದೊಂದಿಗೆ ಸಹಿಸಿದ್ದರು. ಆದರೆ ಸಾಮ್ರಾಜ್ಯಶಾಹಿಗಳ ದೌರ್ಜನ್ಯ ಮಿತಿ ಮೀರಿ ಹೋಗುತ್ತಿರುವುದರಿಂದ ಆ ರಾಷ್ಟ್ರಗಳಲ್ಲಿ ಜನತೆಯನ್ನು ಬಡಿದೆಬ್ಬಿಸುವ ಹೋರಾಟದ ಅಲೆಗಳು ಏಳುವ ಸಾಧ್ಯತೆ ಇದೆ.

ಈ ಹೋರಾಟದ ಪ್ರಕ್ರಿಯೆಯು ಕಾವನ್ನು ಹೆಚ್ಚಿಸುವಂತೆ ಶ್ರಮಿಸುವ ಮೂಲಕ ಹಿರೋಷಿಮಾ ಮತ್ತು ನಾಗಸಾಕಿಯಂತಹ ಅಣು ದುರಂತ ಮುಂದಿನ ದಿನಗಳಲ್ಲಿ ಎಂದೂ ನಡೆಯದಂತೆ ತಡೆಗಟ್ಟಬಹುದಾಗಿದೆ. ನಮ್ಮ ಮುಂದಿರುವ ಏಕೈಕ ಉಪಾಯ ಇದಾಗಿದೆ. ●

ಹಿಬಾಕುಷ್‌ಗಳು

ಅಣುಬಾಂಬ್ ದಾಳಿಯ ಬಳಿಕ ಅಣು ವಿಕಿರಣದಿಂದಾಗಿ ಅನೇಕರಿಗೆ ಕ್ಯಾನ್ಸರ್ ವ್ಯಾಧಿ ತಗುಲಿತು. ವಿಕಿರಣದ ಜೈವಿಕ ದುಷ್ಪರಿಣಾಮದಿಂದಾಗಿ ಅನೇಕ ಮಕ್ಕಳು ವಿಕಾರ ರೂಪವನ್ನು ಪಡೆದಿದ್ದವು. ಮೂಗು, ಕಣ್ಣು, ಕಿವಿ ಮುಂತಾದ ಅವಯವಗಳಿಲ್ಲದ ಮಾಂಸದ ಮುದ್ದೆಗಳನ್ನು ಹೆಂಗಳೆಯರು ಹಡೆದರು ಚೆಂಡಿನ ಗಾತ್ರದ ತಲೆಯುಳ್ಳ ಅನೇಕ ಮಕ್ಕಳು ಹುಟ್ಟಿದವು.

ಆದರೆ ಈ ರೀತಿ ಇರುವ ವ್ಯಕ್ತಿಗಳನ್ನು ಜಪಾನ್ ಜನ ಬಹಿಷ್ಕೃತರಂತೆ ಕುಷ್ಠ ರೋಗಿಗಳಿಗಿಂತಲೂ ಕಡೆಯಾಗಿ ಕಂಡರು ಕೊನೆಗೆ ಇವುಗಳಿಂದ ಬದುಕಿ ಉಳಿದ ಜನರನ್ನು 'ಹಿಬಾಕುಷ್'ರೆಂದು ಕರೆದರು.

ಇವುಗಳ ದುಷ್ಪರಿಣಾಮ ಅಂದು ಕೊನೆಯಾಗದೆ, ಹಲವಾರು ತಲೆಮಾರುಗಳಿಗೆ ವರ್ಗಾವಣೆಯಾಗಿ ಇಂದಿಗೂ ಅಲ್ಲಲ್ಲಿ ಇಂತಹ ಮಕ್ಕಳ ಜನನವನ್ನು ಕಾಣಬಹುದಾಗಿದೆ. ಜಪಾನಿನಲ್ಲಿ ಸುಮಾರು 3,60,000 ಜನರಿಗೆ ಹಿಬಾಕುಷ್ ಪ್ರಶಸ್ತಿ ಪತ್ರ ನೀಡಲಾಗಿದೆ ಇಂದೂ ಸಹ ಜಪಾನ್‌ನಲ್ಲಿ ಇವರು ಪ್ರತ್ಯೇಕ ಜೀವನ ನಡೆಸಬೇಕಾಗಿದೆ. ತಮಗೆ ವಿಕಾರ ಮಕ್ಕಳು ಹುಟ್ಟಬಹುದೆಂಬ ಭೀತಿಯಿಂದ ಅನೇಕರು ಹಿಬಾಕುಷರನ್ನು ಮದುವೆಯಾಗಲು ನಿರಾಕರಿಸುತ್ತಾರೆ.

ನಾಗಸಾಕಿಯಲ್ಲಿ ಬಾಂಬ್ ಸ್ಫೋಟಗೊಂಡ ಕೇಂದ್ರದಿಂದ 1.2 ಕಿ.ಮೀ. ದೂರದಲ್ಲಿರುವ ಶಸ್ತ್ರಾಸ್ತ್ರ ಉತ್ಪಾದನಾ ಕಾರ್ಖಾನೆಯಲ್ಲಿ 14 ವರ್ಷ ಹರೆಯದ ಸೆಂಜಿ ಯಮಗುಚಿ ಕೆಲಸ ಮಾಡುತ್ತಿದ್ದ. ಬಾಂಬ್ ಸ್ಫೋಟವಾದಾಗ ಕಟ್ಟಡದ ಹೊರಗೆ ಕೆಲಸ ಮಾಡುತ್ತಿದ್ದ. ಸೆಂಜಿ ಯಮಗುಚಿಯ ದೇಹದ ಬಲ ಭಾಗವೆಲ್ಲಾ ಸುಟ್ಟು ಹೋದಂತಾಯಿತು. ಅನೇಕ ಸಮಯದ ವರೆಗೆ ದೇಹ ನೋಡಲು ಅಸಾಧ್ಯವಾದ ಸ್ಥಿತಿಯಲ್ಲಿತ್ತು.

ಆಸ್ಪತ್ರೆಯಿಂದ ಹೊರ ಬಂದ ಬಳಿಕ ಎದುರಾಗುತ್ತಿರುವ ಜೀವನದ ಕ್ರೂರತೆಯನ್ನು ಸಹಿಸಲು ಅಸಾಧ್ಯವಾಯಿತು. ಆತನನ್ನು ನೋಡಿದ ಮಕ್ಕಳು ಸೇರಿದಂತೆ ಹಲವರು "ಪಿಶಾಚಿ ಬರುತ್ತಿದ್ದಾನೆ" ಎಂದು ಬೊಬ್ಬಿಡಲು ಆರಂಭಿಸಿದರು.

ಮಾನಸಿಕ ಹಿಂಸೆಯಿಂದ, ಅನೇಕ ಶಸ್ತ್ರ ಚಿಕಿತ್ಸೆ ಬಳಿಕವೂ ಕಾಯಿಲೆ ಗುಣವಾಗದಿರುವಾಗ ಆತ್ಮಹತ್ಯೆ ಮಾಡಲು ಯಮಗುಚಿ ಪ್ರಯತ್ನಿಸಿದ.

ಆದರೆ, ಅಣು ಮತ್ತು ಹೈಡ್ರೋಜನ್ ಬಾಂಬ್ ಕೊನೆಗೊಳಿಸುವ ಬೇಡಿಕೆಯನ್ನು ಇಟ್ಟುಕೊಂಡು ಬೆಳೆಯುತ್ತಿರುವ ಸಾರ್ವಜನಿಕ ಪ್ರತಿಭಟನೆಯನ್ನು ಕಂಡು ಜೀವಿಸಲು ಉತ್ಸಾಹ ತೋರಿದ.

ಹಿಡಾರಿಕೊ, ಕಂಪೆನಿಯ ಪ್ರತಿನಿಧಿ ಆಗಿ ಈಗ ಕೆಲಸ ನಿರ್ವಹಿಸುತ್ತಿರುವ 58ವರ್ಷ ಪ್ರಾಯದ ಯಮಗುಚಿ ಅವರು ಅಣು ಉಪಕರಣಗಳ ಮೇಲೆ ನಿಷೇಧ ಹೇರುವಂತೆ ಒತ್ತಾಯ ಮಾಡುವುದಕ್ಕಾಗಿ ತನ್ನ ಪೂರ್ಣ ಸಮಯವನ್ನು ವಿನಿಯೋಗಿಸುತ್ತಿದ್ದಾನೆ.

ಗುಬ್ಬಚ್ಚಿಯೂ ರೈತನೂ

ಊರೊಂದರಲ್ಲಿ ಒಬ್ಬ ಬಡ ರೈತನಿದ್ದ. ಆತ ಕಷ್ಟದಿಂದ ಜೀವನ ಸಾಗಿಸುತ್ತಿದ್ದ. ಅದೊಂದು ದಿನ ಚಿಂತಾ ವಿಹ್ವಲನಾಗಿ ತಲೆಮೇಲೆ ಕೈ ಹೊತ್ತು ಅಳುತ್ತಿದ್ದ. ಆತ ಸಪ್ಪು ಆ ದಾರಿಯಾಗಿ ಹಾರಿ ಹೋಗು ತ್ತಿದ್ದ ಗುಬ್ಬಚ್ಚಿಗಳ ಗುಂಪೊಂದು ಕಂಡು ಆತನ ಸ್ಥಿತಿಯ ಬಗ್ಗೆ ವಿಚಾರಿಸಲು ರೈತನು "ಏನು ಹೇಳಲಿ ನನ್ನ ದುರ್ವಿಧಿಗೆ. ಬಂಗಾರದಂತ ಹೊಲವಿದ್ದರೂ ಆಳುಕಾಳು ಗಳಿಲ್ಲದೆ ಕಷ್ಟದಲ್ಲಿದ್ದೇನೆ. ಹೊಲದ ಕೆಲಸಕ್ಕೆ ಕರೆದರೆ ಯಾರೂ ಬರುವುದಿಲ್ಲವೆಂದರು!" ಎಂದನು.

ಕೂಡಲೇ ಗುಬ್ಬಚ್ಚಿಗಳು ಕಾರಣ ವೇನು? ಎಂದು ಕೇಳಲು

ನಮ್ಮಪ್ಪ ತೀರಿಕೊಂಡಾಗ ಇದ್ದ ಭೂಮಿಯನ್ನು ಅರ್ಧ ಅಣ್ಣನಿಗೂ, ಅರ್ಧ ನನಗೂ ಹಂಚಿದ. ಹಣದಿಂದ ಮೆರೆಯುವ ನನ್ನಣ್ಣನು ನನ್ನ ಹೊಲದಲ್ಲಿ ದುಡಿಯ ಲೆಂದು ಬಂದವರಿಗೆಲ್ಲಾ ಹೆಚ್ಚು ಸಂಬಳ ಕೊಡುವುದಾಗಿ ಹೇಳಿ ಕರೆದೊಯ್ದ. ಇದೀಗ ಕೆಲಸವೆಲ್ಲಾ ಅರ್ಧಕ್ಕೇ ನಿಂತು ನಾನು ಕಷ್ಟಕ್ಕೀಡಾದೆ! ಎಂದು ಹೇಳಲು ಗುಬ್ಬಚ್ಚಿಗಳು ಆತನೊಂದಿಗೆ "ನೀನೊಂದು ಶರ್ತಕ್ಕೆ ಒಪ್ಪುವಿಯಾದರೆ ನಿನ್ನ ಕಷ್ಟ ಪರಿ ಹರಿಸುವೆವು" ಎಂದು ಗುಬ್ಬಚ್ಚಿಗಳು ಹೇಳಿ ಕೊಂಡವು.

"ಅದೇನು ಶರ್ತ...... ಬೇಗ ಹೇಳಿ" ಎಂದ ರೈತ.

ನಾವು ನಿನ್ನ ಹೊಲದಲ್ಲಿ ಉಳಲು ಬಿತ್ತಲು ಸಹಾಯ ಮಾಡುವೆವು. ಬಂದ ಫಸಲಿನಲ್ಲಿ ಏನಾದರೂ ಸ್ವಲ್ಪಾಂಶ ನಮಗೆ ಕೊಡಲೇಬೇಕು ಈ ಶರ್ತಕ್ಕೆ ಒಪ್ಪು ವೆಯಾ? ಎಂದವು.

ರೈತನಿಗೆ ಆನಂದವಾಯಿತು. ಕೂಡಲೇ ಸಮ್ಮತಿಸಿದ. ಸ್ವಲ್ಪಾಂಶ ಅಲ್ಲ ಸಿಕ್ಕಿದರಲ್ಲಿ ಅರ್ಧಾಂಶವನ್ನು ಕೊಡುವೆನೆಂದು ಮಾತು ಕೊಟ್ಟ. ಗುಬ್ಬಚ್ಚಿಗಳು ರೈತನ ಹೊಲ ದಲ್ಲಿ ಶ್ರಮಪಟ್ಟು ದುಡಿದವು. ಬಿತ್ತನೆ ಕೆಲಸ ಮುಗಿಸಿ "ಆಗಾಗ ಬರುತ್ತಿರುತ್ತೇವೆ" ಎಂದು ಹೇಳಿ ಹಾರಿಹೋದವು. ಬಿತ್ತಿದ ಬೀಜಗಳು ಮೊಳೆತು ಗದ್ದೆ ಹಸಿರಾಗಿ ಕಂಗೊಳಿಸುತ್ತಿದ್ದಂತೆ ಗುಬ್ಬಚ್ಚಿಗಳು ಮತ್ತೆ ಹಾರಿಬಂದು ಗದ್ದೆಯ ಸುತ್ತಮುತ್ತ ಹಾರಿ ಕ್ರಿಮಿ ಕೀಟಗಳನ್ನೆಲ್ಲಾ ಹೆಕ್ಕಿ ತಿಂದು ಕಳೆ ಗಿಡಗಳನ್ನೆಲ್ಲಾ ಕಿತ್ತೆಸೆದು ಹಾರಿಹೋದವು. ದಿನಾ ಹೀಗೇ ಜೋಪಾನಗೊಳಿಸುತ್ತಾ ತೆನೆ ಗಳು ಬಲಿಯುವ ಹೊತ್ತಿಗೆ ರೈತನಲ್ಲಿ ಶರ್ತವನ್ನು ಮತ್ತೊಮ್ಮೆ ಜ್ಞಾಪಕಕ್ಕೆ ತಂದವು. "ತೆನೆಗಳು ಬಲಿತಿಲ್ಲ ಸ್ವಲ್ಪ ದಿವಸ ಹೋಗಲಿ" ಎಂದ ರೈತ.

ರೈತ ಹೇಳಿದಂತೆ ಸ್ವಲ್ಪ ದಿನಗಳ ನಂತರ ಹೊಲಕ್ಕೆ ಬಂದ ಗುಬ್ಬಚ್ಚಿಗಳು ಕಾಣುವುದೇನು......? ಗದ್ದೆ ಪೂರ್ತಿ ಬೋಳಾಗಿತ್ತು. ಫಸಲನ್ನು ಪೂರ್ತಿ ಕೊಯ್ದು ರೈತ ಮನೆಯೊಳಗೆ ಕೂಟ್ಟಿದ್ದ. ಗುಬ್ಬಚ್ಚಿಗಳು ರೈತನ ಮನೆ ಕಡೆಗೆ ಹೋಗಿ "ಅಯ್ಯಾ...... ನೀವು ಮಾತು ಕೊಟ್ಟಂತೆ ನಮಗೆ ಬರಬೇಕಾಗಿದ್ದ ಕಾಳುಗಳನ್ನು ನೀಡು..." ಎಂದು ಬೇಡಿದವು.

"ನೀವು ಪುಟ್ಟ ಹಕ್ಕಿಗಳು, ನಿಮ್ಮಿಂದ ನಾನು ಸಹಾಯ ಬಯಸಿದ್ದೆ ಎಂದರೇನು? ಫಸಲಿನಲ್ಲಿ ಅರ್ಧಾಂಶ ನಿಮಗೆ ಕೊಡುವು ದೆಂದರೇನು? ಕೇಳಿದರೆ ಯಾರಾದರೂ ದಕ್ಕು ಬಿದ್ದಾರು! ಆದರೆ ನೀವು ಬಂದು ನಕ್ಕೆ ಬರಿಗೈಲಿ ಹೋಗಬಾರದು" ಎಂದು ಹೇಳಿ ಸ್ವಲ್ಪ ಕಾಳುಗಳನ್ನು ಅವುಗಳ ಮುಂದೆ ಎಸೆದು ನಿಮ್ಮ ದುಡಿಮೆಗೆ ಪ್ರತಿ ಫಲ...ಎಂದು ಹೇಳಿ ಉಳಿದ ಮೂಟೆ ಗಟ್ಟಲೆ ಭತ್ತವನ್ನು ಗಾಡಿಯಲ್ಲಿಟ್ಟು ಪೇಟೆಯ ಕಡೆಗೆ ಮಾರಲು ಹೊರಟನು.. ಕ್ರೋಧಗೊಂಡ ಗುಬ್ಬಚ್ಚಿಗಳೆಲ್ಲಾ ದಾರಿ ಯಲ್ಲಿ ಭತ್ತದ ಮೂಟೆಗಳ ಮೇಲೇರಿ ಕುಕ್ಕಿಕುಕ್ಕಿ ಹರಿದು ಹಾಕಿದುವು. ದಾರಿ ಯುದ್ದಕ್ಕೂ ಕಾಳುಗಳು ಚೆಲ್ಲಿಹೋದುವು. ರೈತನಿಗೆ ತುಂಬಾ ನಷ್ಟವುಂಟಾಯಿತು. ಸಿಟ್ಟಾದ ರೈತನು ಗುಬ್ಬಚ್ಚಿಗಳಿಗೆ ನೀವು ಮತ್ತೆ ಊರಿಗೆ ಬರದಂತಾಗಲೆಂದು" ಶಪಿ ಸಿದನು. ಗುಬ್ಬಚ್ಚಿಗಳಿಗೆ ಗೂಡಿನ ದಾರಿ ಮರೆತುಹೋಗಿ ಪೇಟೆಯಲ್ಲೆ ಉಳಿದವು. ಅಂದಿನಿಂದ ಇಂದಿನವರೆಗೂ ಗುಬ್ಬಚ್ಚಿಗಳು ಪೇಟೆಯಲ್ಲಿ ಅಂಗಡಿಯೊಳಗೆ ಗೂಡುಕಟ್ಟಿ ವಾಸಿಸುತ್ತಾ ತಮ್ಮ ನ್ಯಾಯದ ಬೇಡಿಕೆ ಸಲ್ಲಿಸದ ದ್ವೇಷದಿಂದ ಪೇರಿಸಿಟ್ಟ ಕಾಳು-ಬೇಳೆಗಳ ಮೂಟೆಗಳನ್ನು ಕುಕ್ಕಿ ಕೊತು ಮಾಡಿ ತಿನ್ನುತ್ತಾ ಉಪದ್ರವಿಸುತ್ತಾ ಇವೆ.

ಕೆ. ಆನಂದ ಆಚಾರ್ಯ

ರಾಜೇಂದ್ರ ಸಾಲಿಗ್ರಾಮ



'ಮಾತು ಮನೆ ಹಾಳು
ಕೂತು ಗಡಿಗೆ ಹಾಳು
ಎನ್ನುವ ಗಾದೆ ವ್ಯರ್ಥವೆಂದಾಯ್ತು'

ಮಕ್ಕಳ ತೋಟ

ಮಕ್ಕಳೇ ಎದ್ದೇಳಿ

ಮಕ್ಕಳೀರಾ ಎದ್ದೇಳಿ
ನಿದ್ದೆಗಣ್ಣನು ತೊರೆದು
ಬಿದ್ದಿದ್ದು ಸಾಕಿನ್ನು
ಮೇಲೆದ್ದು ಬನ್ನಿ.

ಪೂರಿ ಬೆಳ್ಳಿದಾವಾಗಿ
ಚೇತನವ ನೀವು ಪಡೆದು
ಹೊಸ ಬಾಳ ದಾರಿಯನು
ಹುಡುಕಲೆದ್ದೇಳಿ

ಹಳೆಯ ಹಾಡದು ಸಾಕು
ಹೊಸ ತಾಳ ಹಾಕಿ
ಹೊಸನಾದ ಕಟ್ಟಲು
ಒಂದಾಗಿ ಹಾಡಿ.

ಎತ್ತರಕೆ ಏರಿರುವ
ಸುತ್ತಲಿನ ದೇಶಗಳ
ಮುಟ್ಟಲು ಮೇಲೇಳಿ
ದಿಟ್ಟತನದಿ ನೀವು.

ಹರಿಯಲಿ ಹೊಸನೀರು
ಕೊಚ್ಚಿ ಹೋಗಲಿ ಕೊಳೆನೀರು
ಉದಯಿಸಲಿ ನವ ಸೃಷ್ಟಿ
ಮೂಡಲಿ ಹೊಸ ದೃಷ್ಟಿ.

—ಸಿದ್ದಪ್ಪ ಕುಂಬಾರ್

—ಡ್ರೀಮ್‌ಗರ್ಲ್—

(ಆರನೇ ಪುಟದಿಂದ)

ಮುಳುಗಿದ ಮಾನುಷಾಕೃತಿ. ಮುಖಿ ಬಟ್ಟರೆ ಉಳಿದೆಲ್ಲ ಭಾಗದಲ್ಲೂ ಅಂಟಿ ಕೊಂಡಿರುವ ಕಪ್ಪು ಬಣ್ಣದ ಕೊಳೆ. ಬಟ್ಟೆಬರೆಗಳಿಂದ ತೊಟ್ಟಿಕ್ಕುತ್ತಿರುವ ನೀರ ಹನಿಗಳು!!

ತಟ್ಟನೆ ಅವನಿಗೆ ಮಹಾನವಮಿಯ ವೇಷಗಳ ನೆನಪಾಯಿತು.

ಒಳಹೋಗಿ ಮೇಜಿನ ಮೇಲಿದ್ದ ಕೆಲವು ನಾಣ್ಯಗಳನ್ನು ಕೈಗೆತ್ತಿಕೊಂಡು ಬಂದ ರೊಯ್ಯನೆ ರಾಚಿ ಹೊಡೆದ ದುರ್ಗಂಧ ಮೂಗಿನ ಹೊಳ್ಳೆಗಳನ್ನು ಹೊಕ್ಕಾಗ ಹೊಟ್ಟೆ ತೊಳೆಸಿಕೊಂಡಂತಾಯಿತು. 'ಯಾವ ಕಪಿಯಪ್ಪಾ ಈ ಕೊಳಚೆಯನ್ನು ಮೈಗೆ ಹಚ್ಚಿಕೊಂಡು ವೇಷ ಹಾಕಿದ್ದು? ಮನದಲ್ಲೇ ಶಪಿಸುತ್ತಾ ನಾಣ್ಯಗಳನ್ನು ಮಾನುಷಾಕೃತಿಯೆಡೆಗೆ ಚಾಚಿದ.

"ಇದು ನಾನೋ, ನಿನ್ನ ಗೆಳೆಯ ಸುರೇಶ್" ಮಾನುಷಾಕೃತಿ ಮತ್ತೊಮ್ಮೆ ತುಟಿಯಾಲಗಿಸಿತು.

ಮಹೇಶ್ ಕಣ್ಣುಗಳನ್ನ ಕತ್ತಲು ಕವಿದು ಕುಸಿದುಬೀಳುವುದರಲ್ಲಿದ್ದ. ಸಾವ ರಿಸಿಕೊಂಡು ಮಾನುಷಾಕೃತಿಯ ಕಣ್ಣುಗ ಗಳಲ್ಲಿ ಕಣ್ಣಿಟ್ಟು ಸೂಕ್ಷ್ಮದೃಷ್ಟಿ ಬೀರಿದ. ಹೌದು! ತನ್ನ ಅಪ್ತ ಗೆಳೆಯ ಸುರೇಶ್!!

ಅವನಿಗೆ ತನ್ನ ಗೆಳೆಯನ ಪರಿಸ್ಥಿತಿ ಕಂಡು ನಗು ಉಕ್ಕಿ ಬಂತು, ಆದರೆ ನಗು ವನ್ನು ಗಂಟಲಲ್ಲೇ ಅದುಮಿ ಕೇಳಿದ "ಅಲ್ಲಪ್ಪೋ, ನೀನ್ಯಾವಾಗಾದಿಂದ ಈ ಹಂದಿಗಳ ಮಂದಕ್ಕೆ ಸೇರಿದ್ದು?

"ನಿನ್ನ ಹಣ ಬಿದ್ದಂದಿನಿಂದ ತಮಾಷೆ ಮಾಡಿದರೆ ಸಿಗಿದು ಬಿಡ್ತೀನಿ ಸುರೇಶ್ ಘರ್ಜಿಸಿದ.

ಮಹೇಶ್ ಪೆಚ್ಚಾದ. ಆದರೆ ಹೊಂಗೆ ತೋರಗೊಡದೆ ಮುಖದಲ್ಲಿ ನಗು ತಂದು ಕೊಂಡು ಹೇಳಿದ "ತಮಾಷೆಗಾಗಿ ಹೇಳಿ ದಲ್ಲಾ ಸುರೇಶ್. ಅದೆಲ್ಲ ಬಿಡು. ಈಗ ನೀನು ಒಳಗೆ ಬಂದು ಬಟ್ಟೆ ಬದಲಿಸಿ ದೂರ ಬಿಸೆದು ಸ್ನಾನಮಾಡು. ನನಗಂತೂ ಈ ಸುಗಂಧ ಕವೆದುಕೊಂಡಿರ್ಲಿಕ್ಕಾಗೋಲ್ಲ"

"ಸಿಗಿದು ಬಿಡ್ತೀನಿ–ವಾಸನೆ ಅಂದರೆ ನಿನ್ನ ಹೆಸ ಹೊನ್ನಿಕ್ಕೆ ಹೋಗಿ ಅದುದು ಇದಲ್ಲ".

"ನಾನೇನು ಮಾಡಿದೆ?" ಕೇಳಬೇಕೆನಿಸಿ ತವನಿಗೆ. ಆದರೆ ಆ ಪ್ರಶ್ನೆಯಿಂದ ಸುರೇಶನ ಸಾಬಗಬುದ್ಧ್ಯಾಗ್ರದಿಂದು

ತಿಳಿದ ಮಹೇಶ್ ಆ ಕೊಳಕು ವಾಸನೆ ಯಿಂದ ಮುಕ್ತಿ ಪಡೆಯಲು ಗೆಳೆಯನಿಗೆ ಕೈಮುಗಿದು ನಮ್ರತೆಯಿಂದ ಹೇಳಿದ "ಸುರೇಶ್, ಅದೆಲ್ಲ ಮತ್ತೆ ಮಾತನಾಡೋಣ. ಯಾರಾದರೂ ನಿನ್ನ ಅವಸ್ಥೆಯನ್ನು ನೋಡಿ ನಗುವ ಮೊದಲು ನೀನು ಒಳಬಂದು ಸ್ನಾನ ಮಾಡು".

ಸುರೇಶ್ ಕೆಂಗಣ್ಣುಗಳಿಂದ ಗೆಳೆಯ ನನ್ನು ನೋಡುತ್ತಾ ಬಾತ್‌ರೂಮಿಗೆ ನಡೆದ. ಕಸ್ತೂರಿ ಮೃಗ ಹೋದ ದಾರಿ ಯಲ್ಲಿ ಸುವಾಸನೆ ಹರಡುವಂತೆ ಸುರೇಶ್ ರೂಮಿನೊಳಗಿನಿಂದ ಹಾದು ಹೋದಾಗ ಅವನ ದೇಹದಿಂದ ಹೊಮ್ಮಿದ ದುರ್ಗಂಧ ರೂಮಿನೊಳಗೆ ವ್ಯಾಪಿಸಿತು. ಮಹೇಶ್ ಮುಸಿಮುಸಿ ನಗುತ್ತಾ ಬಾಗಿಲು ಮುಚ್ಚಿ ಸ್ಟವ್ ಉರಿಸಿ ಕಾಫಿ ತಯಾರಿಸತೊಡಗಿದ.

ಹತ್ತು ನಿಮಿಷ ಕಳೆಯಿತು.

ಸುರೇಶ್ ಸ್ನಾನ ಮುಗಿಸಿ ಮಹೇಶ್ ಕೊಟ್ಟ ಲುಂಗಿಯನ್ನುಟ್ಟುಕೊಂಡು ಬಾತ್‌ರೂಮಿನಿಂದ ಹೊರಬಂದ ಮಹೇಶ್ ತಯಾರಿಸಿಟ್ಟಿದ್ದ ಬಿಸಿಬಿಸಿ ಕಾಫಿ ಗುಟುಕರಿಸಿದಾಗ ಅವನ ಕ್ರೋಧ ಅರ್ಧಕ್ಕರ್ಧ ಇಳಿದುಬಿಟ್ಟಿತು. ಅಲ್ಲೇ ಇದ್ದ ಕುರ್ಚಿಯೊಂದರಲ್ಲಿ ಕುಳಿತುಕೊಂಡು ಉರುಳಿ ಬಿದ್ದಿದ್ದ ಮೌನದ ತೆರೆಯನ್ನು ಸರಿಸಿದ,

"ಮಹೇಶಾ, ನಾನಿಂದು ಒಂದು ದೊಡ್ಡ ಗಂಡಾಂತರಕ್ಕೆ ಸಿಲುಕಿ ಬಿಟ್ಟೆ ಕಣೋ..."

ಏನೋ ?! ಏನಾಯಿತು? ನಾನು ವಿಷಯ ತಿಳಿಯೋಕೆ ಕಾತರದಿಂದಕಾಯ್ತಾ ಇದ್ದ, ಮಹೇಶ್ ಆತುರ ವ್ಯಕ್ತಪಡಿಸಿದ.

"ಇಂದು ಸಂಜೆ ನಾನು ಸಿಟಿ ಲೈಬ್ರರಿಯಿಂದ ರೂಮಿಗೆ ಹೊರಟಿದ್ದೆ. ಸುಮಾರು ಅರು-ಅರೂವರೆಯಾಗಿರ ಬಹುದು. ನನಗೆದುರಾಗಿ ರಸ್ತೆಯಲ್ಲಿ ಒಂದು ತಂದೆ-ಮಗಳು ಬರ್‍ತಿದ್ದರು. ತಂದೆಯಿರುವಾಗ ಮಗಳಿಗೆ ಲೈನ್ ಹೊಡೆ ಯುವುದು ಒಳ್ಳೆಯದಲ್ಲವಲ್ಲಾ. ಅದಕ್ಕೆ ನಾನು ನನ್ನಷ್ಟಕ್ಕೆ ಹೋಗ್ತಾ ಇದ್ದೆ. ಇನ್ನೇನು ಅವರನ್ನು ದಾಟಿ ಮುಂದೆ ಹೋಗ್ತೀನೆ ಅನ್ನುವಾಗ ಯಾರೋ ಚಿಟಿಕೆ ಹೊಡೆದು ಕರೆದಂತಾಗಿ ತಂದೆ-ಮಗಳತ್ತ ತಿರುಗಿ ನೋಡಿದೆ. ಮಹೇಶಾ, ನಾನು ಹೃದಯ ಒಡೆದು ಸಾಯುದ್ದು ನನ್ನ ಅಜ್ಜ ಮಾಡಿದ ಪುಣ್ಯದ ಫಲ..."

"ಯಾಕೋ?" ಮಹೇಶ್ ವಿಷಯದ ತಿರುಳರಿಯದೆ ಪ್ರಶ್ನಿಸಿದ.

"ಮತ್ತ್ಯಾಕೆ-? ನನ್ನ 'ಡ್ರೀಮ್‌ಗರ್ಲ್' ತನ್ನ ದಪ್ಪ ಮೀಸೆಯ ತಂದೆಯೊಂದಿಗೆ ನಿಂತು ನನ್ನನ್ನು ಮಿಕಮಿಕ ನೋಡುತ್ತಿದ್ದಳು."

ಸುರೇಶ್ ಬರಿದಾದ ಗ್ಲಾಸನ್ನು ಮೇಲಿಟ್ಟು ಮುಂದುವರಿಸಿದ "ನನಗೆ ತೋರಿತು ಇದು ವಿಷಯ ನೆಟ್ಟಗಾಗೋಲ್ಲ ವೆಂದು. ಗಮನಿಸದವನಂತೆ ಐಪರವನೆ ಹೆಜ್ಜೆಹಾಕತೊಡಗಿದೆ. ದಪ್ಪಮೀಸೆಯಾತ ಹಿಂಬಾಲಿಸಿಕೊಂಡು ಬರತೊಡಗಿದ. ಇನ್ನೇನು ಆತ ನನ್ನನ್ನು ಸಮೀಪಿಸಿದ ಅನ್ನುವಾಗ ನಾನು ಓಟಕಿತ್ತೆ. ಆತ ಬಿರು ಗಾಳಿಯಂತೆ ನುಗ್ಗಿ ಬರತೊಡಗಿದ. ನಾನು ಹೆಚ್ಚುಕಮ್ಮಿ ಅರ್ಧಗಂಟೆಯಾದರೂ ನಿಲ್ಲದೆ ಓಡುತ್ತಲೇ ಇದ್ದೆ. ನನ್ನ ಬಾಲಹಿಡಿದವನಂತೆ ಹಿಂಬಾಲಿಸುತ್ತಲೇ ಬರತೊಡಗಿದ. ನನ್ನ ಅದೃಷ್ಟವೋ ದುರ ದೃಷ್ಟವೋ ಒಂದು ಕಾಂಪೌಂಡ್‌ವಾಲ್ ನನಗೆದುರಾಯಿತು. ಜೀವದ ಮೇಲಿನ ಆಸೆ ತೊರೆದು ನಾನು ಜಿಗಿದೆ. ಮೇಲಕ್ಕೆ ಚಿಮ್ಮಿದ ನಾನು ಹೋಗಿ ಬಿದ್ದುದು ಒಂದು ದೊಡ್ಡ ಚರಂಡಿಯೊಳಗೆ. ಯಾವುದೋ ಹೊಟೇಲಿನಿಂದ ಹರಿದು ಬರುತ್ತಿದ್ದ ಕೊಳಕು ನೀರು ಶೇಖರವಾಗಿದ್ದ ಚರಂಡಿಯದು. ಬಿದ್ದ ರಭಸಕ್ಕೆ ನಾನು ಹೆಚ್ಚುಕಮ್ಮಿ ಸಂಪೂರ್ಣವಾಗಿ ಮುಳುಗಿಬಿಟ್ಟೆ. ಐದು ನಿಮಿಷದ ಸತತ ಪ್ರಯತ್ನದ ನಂತರ ನಾನು ನೀರಿನೊಳಗಿನಿಂದ ಹೊರಬಂದು ಅತ್ತಿತ್ತ ಕಣ್ಣು ಹಾಯಿಸಿದೆ. ದಪ್ಪ ಮೀಸೆಯಾತ ಹೊರಟುಹೋಗಿದ್ದ. ಸಮಾಧಾನದ ನಿಟ್ಟುಸಿರುಬಿಟ್ಟು ಮೆಲ್ಲನೆ ಒಳದಾರಿಯಾಗಿ ನಿನ್ನಲ್ಲಿಗೆ ತಲುಪಿದೆ.

ಸುರೇಶ್ ಮಾತು ನಿಲ್ಲಿಸಿ ಗೆಳೆಯನ ಮುಖ ನೋಡಿದ. ಅಷ್ಟರವರೆಗೂ ಕಷ್ಟಪ್ರಯತ್ನದಿಂದ ನಿಯಂತ್ರಿಸಿದ್ದ ನಗು ಕಟ್ಟೆಯೊಡೆದು ಹೊರಧುಮ್ಮಿಕ್ಕಿತು. ಮಹೇಶ್ ಗಹಗಹಿಸಿ ನಗತೊಡಗಿದ.

ಸುರೇಶ್‌ನಿಗೆ ಒಮ್ಮೆಲೇ ಸಿಟ್ಟುನೆತ್ತಿ ಗೇರಿತು. ಘರ್ಜಿಸಿದ "ಸಿಗಿದುಬಿಡ್ತೀನಿ" "ಯಾರನ್ನು? ದಪ್ಪ ಮೀಸೆಯಾತನನ್ನು?

"ಅಲ್ಲ; ನಿನ್ನನ್ನು"

"ಯಾಕೆ?"

"ನಿನ್ನಿಂದಾಗಿಯಲ್ವಾ ನಾನೀ ಗಂಡಾಂತರಕ್ಕೆ ಸಿಕ್ಕಿಬಿದ್ದಾದು. ಒಂಟಿ ಸಲಗನಂತೆ ಈ ಪಟ್ಟಣದಲ್ಲಿ ವಿಹರಿಸುತ್ತಿದ್ದ ನಾನು ಇನ್ನು ಬೋನಿಯೋಗಟ್ಟ ಮೃಗದಂತಿರ ಬೇಕಾ?"

"ಅದೇನಿದ್ದರೂ ನಾನು ಸೇಫ್..."

"ನಿನ್ನನ್ನು ಸೇಫ್ಟಯಾಗಿರ್‍ಸೋಲ್ಲ. ನಾನು ನಾಳೆಯೇ ಪೊಲೀಸ್ ಸ್ಟೇಶನ್‌ಗೆ ಹೋಗಿ ಆತನಲ್ಲಿ ಎಲ್ಲವನ್ನೂ ತೆರೆದು ಹೇಳ್ತೀನಿ. ನೀನೇ ಎಲ್ಲದಕ್ಕೂ ಕಾರಣ ಅಂತ ತಿಳಿಸ್ತೀನಿ. ನಾನು ಸೇಫ್ಟಯಾಗ್ತೀನಿ. ನೀನು ಕಂಬಿ ಎಣಿಸುತ್ತಾ ಪೊಲೀಸ್‌ಗಳ ಡ್ಯೂಟಿಯ ರುಚಿ ಅನುಭವಿಸುತ್ತಿಯಾ" ಮಹೇಶ್‌ನ ಸಂತೋಷದ ಬಲೂನಿಗೆ ಸೂಜಿಯಿಂದ ಚುಚ್ಚಿದ.

"ಅಯ್ಯಯ್ಯೊ. ಹಾಗೆ ಮಾಡ್ಬೇಡ ಕಣೋ, ನಾನು ಮೊದಲೇ ಹಾರ್ಟ್ ಪೇಷಂಟ್. ಪೊಲೀಸರ ಕೈಗೆ ಊಕ್ಕಿನ ಹಾರ್ಟ್ ಇರುವವನನ್ನು ಕೊಟ್ಟರೂ ಗುದ್ದಿ ಹತ್ತಿಯ ಹಾರ್ಟ್ ಮಾಡಿ ಬಿಡುತ್ತಾರೆ. ಹಾಗಿರುವಾಗ ನನ್ನ ಅವ ಸ್ಥೆಯೇನಾಗಬಹುದು? ನಾವೇ ಎಲ್ಲದಕ್ಕೂ ಸುಲಭೋಪಾಯ ಹುಡುಕುವ..."

"ಹಾಗಾದರೆ ಹೇಳು ಏನುಉಪಾಯ ಅಂತ"

"ಆಲೋಚನೆ ಮಾಡೋಣ"

ಇಬ್ಬರೂ ಗಹನವಾದ ಚಿಂತೆಯಲ್ಲಿ ತೊಡಗಿದರು.

"ಐಡಿಯಾ" ಮಹೇಶ್ ಅರ್ಕಿಮಿಡೀಸ್‌ನಂತೆ ಬೊಬ್ಬಿಟ್ಟ.

"ಏನೋ..." ಸುರೇಶ್ ಕಾತರದಿಂದ ಕೇಳಿದ.

"ಆತ್ಮಹತ್ಯೆ"

"ಯಾರು?"

"ನೀನು" ಮಹೇಶ್ ವಿರಳ ನಗು ನಕ್ಕ.

"ಯಾಕೆ?"

"ಹಾಗಾದರೆ ನಾನು ಸೇಫ್"

"ಬೇಡ. ಅಷ್ಟು ಸುಲಭದಲ್ಲಿ ನೀನು ಬೇಳೆಬೇಯಿಸಬೇಡ. ನಾನು ಸತ್ತರೆ ನಿನಗೆ ನಿನ್ನ ಡ್ರೀಮ್‌ಗರ್ಲ್‌ನೊಂದಿಗೆ ಚೆನ್ನಾಗಿ ಚೆಲ್ಲಾಟವಾಡಬಹುದಲ್ಲಾ ಎಂಬ ಉದ್ದೇಶ ಅಲ್ವಾ? ಅದು ಮನಸ್ಸಿನೋಳಗೇ ಇಟ್ಟುಬಿಡು. ಆತ್ಮಹತ್ಯೆ ಮಾಡೋದಾದರೆ ನಾನೂ ನೀನೂಒಟ್ಟಿಗೇ ಮಾಡೋಣ".

"ಬೇಡಪ್ಪಾ. ನನಗೆ ಆತ್ಮಹತ್ಯೆಯೆಂದರೆ ಭಯ"

"ಹಾಗಾದರೆ ನಾಳೆ ನಾನು ಪೊಲೀಸ್ ಸ್ಟೇಶನ್‌ಗೆ ಹೋಗ್ತೀನಿ"

"ದಮ್ಮಯ್ಯ. ಅದೊಂದು ಮಾತ್ರ ಬೇಡ. ಬೇರೆ ಉಪಾಯ ಹುಡುಕೋಣ"

ಇಬ್ಬರೂ ಮತ್ತೆ ಆಲೋಚಿಸತೊಡಗಿದರು. ಉಪಯೋಗವಾಗದೆ ಗಂಟೆಗಳು ಉರುಳಿದವು. ಕೊನೆಗೆ ಇಬ್ಬರೂಒಂದು ಒಪ್ಪಂದಕ್ಕೆ ತಲುಪಿದರು. ಅದರ ಪ್ರಕಾರ ಒಂದು ಒಳ್ಳೆಯ ಉಪಾಯ ಹುಡುಕುವವರೆಗೆ ಸುರೇಶ್ ರೂಮಿನೊಳಗೆ ಅವಿತಿರುವುದೆಂದು ತೀರ್ಮಾನಿಸಲಾಯಿತು,

ಐದಾರು ದಿನಗಳು ಕಳೆದವು.

ಪ್ರತಿದಿನವೂ ಮಹೇಶ್ ಹೊಸಹೊಸ ಉಪಾಯಗಳೊಂದಿಗೆ ಸುರೇಶ್‌ನನ್ನು ಸಮೀಪಿಸುತ್ತಿದ್ದ. ಎಲ್ಲದಕ್ಕೂ ಸುರೇಶ್ ನಕಾರಾತ್ಮಕ ಉತ್ತರ ನೀಡುತ್ತಿದ್ದ, ಜೊತೆಗೆ ತಾನು ಪೊಲೀಸ್ ಸ್ಟೇಶನ್‌ಗೆ ಹೋಗಿ ನಡೆದ ಘಟನೆಗಳನ್ನು ವಿವರಿಸಿ ಹೇಳುತ್ತೇನೆ ಎಂದು ಪಟ್ಟು ಹಿಡಿಯ ತೊಡಗಿದ. ಮಹೇಶ್ ಬೇರೆ ದಾರಿ ಕಾಣದೆ ಸುರೇಶ್‌ನ ತೀರ್ಮಾನಕ್ಕೆ ಸಮ್ಮತಿ ಸೂಚಿಸಿದ.

ಮರುದಿನ ಇಬ್ಬರೂ ರಿಕ್ಷಾವೊಂದರಲ್ಲಿ 'ಡ್ರೀಮ್‌ಗರ್ಲ್'ನ ಮನೆಯತ್ತ ಹೊರಟರು. ಮೊದಲು ಅವಳಲ್ಲಿ ಕ್ಷಮೆ ಕೇಳಿ, ನಂತರ ದಪ್ಪ ಮೀಸೆಯಾತನಲ್ಲಿ ವ್ಯವಹರಿಸುವುದು ಎಂದು ಇಬ್ಬರೂ ತೀರ್ಮಾನಿಸಿದ್ದರು. ಹತ್ತು-ಹದಿನೈದು ನಿಮಿಷದ ಪ್ರಯಾಣದ ನಂತರ ಇಬ್ಬರೂ 'ಡ್ರೀಮ್ ಗರ್ಲ್'ನ ಮನೆಯ ಮುಂದೆ ರಿಕ್ಷಾದಿಂದಿಳಿದರು. ನೋಡಿದರೆ ಮನೆಗೆ ಬೀಗ ಹಾಕಲಾಗಿದೆ. ಅಕ್ಕಪಕ್ಕದವರನ್ನು ವಿಚಾರಿಸಿದಾಗ 'ಡ್ರೀಮ್‌ಗರ್ಲ್'ನ ತಂದೆಗೆ ಅರ್ಜೆಂಟಾಗಿ ಟ್ರಾನ್ಸ್‌ಫರ್ ಆಗಿದೆಯೆಂದೂ, ಹಿಂದಿನ ದಿನವೇ ಮನೆ ಖಾಲಿಮಾಡಿ ಹೊರಟುಹೋಗಿದ್ದಾರೆಂದೂ ತಿಳಿಯಿತು. ಸುರೇಶ್-ಮಹೇಶ್ ನಿಂತಲ್ಲಿಂದಲೇ ಕಾಣದ ದೇವರಿಗೆ ಕೈ ಮುಗಿದು. ಒಬ್ಬರನ್ನೊಬ್ಬರು ಅಪ್ಪಿಕೊಂಡರು.

ಫೋಟೋಗ್ರಾಫರ್ ಸ್ಟೈಲಿನಿಂದ.....









ಚಿತ್ರಗಳು: ಕೇಶವ ವಿಟ್ಲ